# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 378

2) ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 11-12-2024

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಮೀನುಗಾರಿಕೆ ಇಲಾಖೆಯ ನಿರ್ವಹಣಾ ವ್ಯಾಪ್ತಿಗೆ ಬರುವ ರಸ್ತೆಗಳಾವುವು; ಈ ರಸ್ತೆಗಳ ಉದ್ದವೆಷ್ಟು; ಪ್ರಸ್ತುತ ಈ ರಸ್ತೆಗಳ ನಿರ್ವಹಣೆಯನ್ನು ಹೇಗೆ ಮಾಡಲಾಗುತ್ತಿದೆ; ರಸ್ತೆ ನಿರ್ವಹಣೆ ಆಯ್ಕೆಗೆ ಪರಿಗಣಿಸುವ ಆದ್ಯತೆಗಳೇನು;</td><td>ಮೀನುಗಾರಿಕೆ ಕೊಂಡಿ (Fisheries Link Roads) ರಸ್ತೆಗಳ ನಿರ್ವಹಣೆ ಮೀನುಗಾರಿಕೆ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.<br><br>ಸದರಿ ಮೀನುಗಾರಿಕೆ ಕೊಂಡಿ ರಸ್ತೆಗಳ ಒಟ್ಟು ಸಂಖ್ಯೆ ಮತ್ತು ಅವುಗಳ ಒಟ್ಟು ಉದ್ದ ಈ ಕೆಳಗಿನಂತಿವೆ.<br><br><table><tr><th>ಕ್ರ ಸಂ</th><th>ಜಿಲ್ಲೆ</th><th>ಒಟ್ಟು ರಸ್ತೆಗಳ ಸಂಖ್ಯೆ</th><th>ಒಟ್ಟು ಉದ್ದ (ಕಿ.ಮೀ.ಗಳಲ್ಲಿ)</th></tr><tr><td>1</td><td>ಉಡುಪಿ</td><td>87</td><td>156.860</td></tr><tr><td>2</td><td>ದಕ್ಷಿಣ ಕನ್ನಡ</td><td>54</td><td>91.20</td></tr><tr><td>3</td><td>ಉತ್ತರ ಕನ್ನಡ</td><td>87</td><td>121.245</td></tr></table><br>ಈ ರಸ್ತೆಗಳ ನಿರ್ವಹಣೆಯನ್ನು ಇಲಾಖೆಯ ಅನುದಾನದಲ್ಲಿ ಮಾಡಲಾಗುತ್ತಿದೆ.<br><br>ಹೆದ್ದಾರಿಯಿಂದ ಮೀನುಗಾರಿಕಾ ಚಟುವಟಿಕೆಗಳು ನಡೆಯುವ ಸ್ಥಳಗಳನ್ನು ಸಂಪರ್ಕಿಸುವ ಕೊಂಡಿ ರಸ್ತೆಗಳು ವಾಹನಗಳ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದನ್ನು ಗುರುತಿಸಿ, ಅಂತಹ ಮೀನುಗಾರಿಕೆ ರಸ್ತೆಗಳನ್ನು ಆದ್ಯತೆ ಮೇರೆಗೆ ನಿರ್ವಹಣೆಗಾಗಿ ಆಯ್ಕೆ ಮಾಡಲಾಗುತ್ತದೆ.</td></tr>
<tr><td>ಆ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಇಲಾಖೆಯ ನಿರ್ವಹಣಾ ವ್ಯಾಪ್ತಿಗೆ ಬರುವ ಎಷ್ಟು ರಸ್ತೆಗಳನ್ನು ನಿರ್ವಹಣೆ ಮಾಡಲಾಗಿದೆ; ಅವುಗಳಿಗಾಗಿ ಕಳೆದ 3 ವರ್ಷಗಳಲ್ಲಿ ಖರ್ಚು ಮಾಡಲಾದ ಮೊತ್ತವೆಷ್ಟು;</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಯಾವುದೇ ಮೀನುಗಾರಿಕಾ ರಸ್ತೆಗಳ ನಿರ್ವಹಣೆಗೆ ಖರ್ಚು ಮಾಡಿರುವುದಿಲ್ಲ.</td></tr>
<tr><td>ಇ)</td><td>ಸದರಿ ಜಿಲ್ಲೆಗಳಲ್ಲಿ 2024-25ನೇ ಸಾಲಿನಲ್ಲಿ ಮೀನುಗಾರಿಕಾ ರಸ್ತೆ ನಿರ್ವಹಣೆ ಯೋಜನೆಯಡಿ ಯಾವ ಯಾವ ರಸ್ತೆಗಳನ್ನು ದುರಸ್ತಿಗಾಗಿ ಆಯ್ಕೆ ಮಾಡಲಾಗಿದೆ; ಇವುಗಳಲ್ಲಿ ದುರಸ್ತಿ ಮಾಡಲಾದ ರಸ್ತೆಗಳೆಷ್ಟು; ದುರಸ್ತಿ ಮಾಡಲು ಬಾಕಿ ಇರುವ ರಸ್ತೆಗಳು ಎಷ್ಟು; ಹೊಸದಾಗಿ ನಿರ್ಮಿಸಲು ಉದ್ದೇಶಿಸಲಾಗಿರುವ ರಸ್ತೆಗಳೆಷ್ಟು;</td><td>2024-25 ನೇ ಸಾಲಿನಲ್ಲಿ ಮೀನುಗಾರಿಕೆ ರಸ್ತೆ ನಿರ್ವಹಣೆ ಯೋಜನೆಯಡಿ ದುರಸ್ತಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 09 ರಸ್ತೆಗಳನ್ನು ಮತ್ತು ಉಡುಪಿ ಜಿಲ್ಲೆಯಲ್ಲಿ 09 ರಸ್ತೆಗಳನ್ನು ಆಯ್ಕೆ ಮಾಡಲಾಗಿದೆ.<br><br>ಸದರಿ ರಸ್ತೆಗಳ ದುರಸ್ತಿಗಾಗಿ 2024-25 ನೇ ಸಾಲಿನಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ದುರಸ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಹೊಸದಾಗಿ ರಸ್ತೆಗಳನ್ನು ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.</td></tr>
</table>

| | | |
|---|---|---|
| ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅತಿಯಾದ ಮಳೆಯಿಂದಾಗಿ ಮತ್ತು ಮೀನುಗಾರಿಕಾ ವಾಹನಗಳ ಹೆಚ್ಚು ಸಾಂದ್ರತೆಯ (ರಿಪೀಟೆಡ್) ಸಂಚಾರದಿಂದಾಗಿ ಮೀನುಗಾರಿಕಾ ರಸ್ತೆಗಳು ಬಲು ಬೇಗನೆ ಹದಗೆಡುತ್ತಿದ್ದು ಇವುಗಳ ದುರಸ್ತಿಗಾಗಿ ಹೆಚ್ಚುವರಿ ಅನುದಾನದ ಅಗತ್ಯವಿದ್ದು ಅದನ್ನು ನೀಡಲು ಸರಕಾರದ ಯೋಜನೆಗಳೇನು? | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಮೀನುಗಾರಿಕೆ ರಸ್ತೆಗಳ ದುರಸ್ತಿ /ನಿರ್ವಹಣೆಗಾಗಿ ಹೆಚ್ಚುವರಿ ಅನುದಾನ ಕೋರುವ ಪ್ರಸ್ತಾವನೆಯು ಪ್ರಸ್ತುತ ಇರುವುದಿಲ್ಲ. |

ಸಂಖ್ಯೆ: ಪಸಂಮೀ ಇ-233 ಮೀಇಯೋ 2024

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು